| |
|---|
| **Deposition Sheets (RP.No.57)** |
| **Form No.4** |

**IN THE COURT OF ADDL. CIVIL JUDGE & J.M.F.C., KARKALA.**

**Criminal Case No. 247/2022**

ಪಿಡ್ಯೂಃ 6 ಸಿಡ್ಲ್ಯೂಃ 12

ಸಾಕ್ಷಿದಾರನ ಹೆಸರು : ಫಾರೂಕ್

ತಂದೆಯ ಹೆಸರು : ಸೌಖತ್ ಆಲಿ

ಪ್ರಾಯ : 35 ವರ್ಷ

ಉದ್ಯೋಗ : ವ್ಯಾಪಾರ

ವಾಸ : ತೆಳ್ಳಾರು

ದಿನಾಂಕ 22.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ಪೊಲೀಸರು ನನ್ನನ್ನು ಮಹಜರಿಗೆ ಕರೆದಿರುವುದಿಲ್ಲ. ನನ್ನ ಸಮಕ್ಷಮ ಪೊಲೀಸರು ಮಹಜರು ಮಾಡಿರುವುದಿಲ್ಲ. ಸಹಿ ಪಡೆದುಕೊಂಡಿರುತ್ತಾರೆ. ಯಾವ ವಿಚಾರಕ್ಕೆ ಎಂದು ಗೊತ್ತಿಲ್ಲ. ಈಗ ನಾನು ನೋಡಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದ್ರಿ ದಾಖಲೆ ವಿಲೇವಾರಿ ಮಹಜರು ಆಗಿದ್ದು ಸಾಕ್ಷಿ ಒಪ್ಪಿದ ಮೇರೆಗೆ ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ನನ್ನ ಜೊತೆ ಬೇರೆ ಯಾರು ಇದ್ದರು ಎಂದು ಗೊತ್ತಿಲ್ಲ. ಎಷ್ಟು ಸಮಯ ಹಿಂದೆ ಸಹಿ ಮಾಡಿರುತ್ತೇನೆ ಎಂದು ಗೊತ್ತಿಲ್ಲ. ಈಗ ನಾನು ನೋಡಿದ 2 ಭಾವಚಿತ್ರಗಳನ್ನು ನಾನು ಇದ್ದೇನೆ. ಅದನ್ನು ಯಾವ ಉದ್ದೇಶಕ್ಕೆ ತೆಗೆದಿರುತ್ತಾರೆ ಎಂದು ಗೊತ್ತಿಲ್ಲ. 2 ಭಾವಚಿತ್ರಗಳಲ್ಲಿ ಸಾಕ್ಷಿ ಇರುವ ಬಗ್ಗೆ ಒಪ್ಪಿದ ಮೇರೆಗೆ ಒಟ್ಟಾಗಿ ನಿಪಿ-10 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ</u> <u>ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

2. ದಿಃ03.02.2021 ರಂದು ಕಾರ್ಕಳ ತಾಲೂಕು ದುರ್ಗಾ ಗ್ರಾಮದ ತೆಳ್ಳಾರು ಆಸಿಯ ಮಂಜಿಲ್ ಎಂಬಲ್ಲಿ ನನ್ನ ಹಾಗೂ ಚಾಸಾ-11 ರವರ ಸಮಕ್ಷಮ ಪೊಲೀಸರು ನ್ಯಾಯಾಲಯದ ಆದೇಶದಂತೆ ಸ್ವಾ ಧೀನಪಡಿಸಿಕೊಂಡ ದನದ ಮಾಂಸವನ್ನು ವಿಲೇವಾರಿ ಮಾಡುವ ಸಮಯದಲ್ಲಿ ತಯಾರಿಸಿದ ಮಹಜರಿಗೆ ಸ್ಥಳದಲ್ಲಿಯೇ ನನ್ನ ಹಾಗೂ ಚಾಸಾ-11 ರವರ ಸಹಿ ಪಡೆದುಕೊಂಡಿದರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ಭಾವಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಎ ಎಸ್ ಎಂ ವಕೀಲರಿಂದಃ ಏನು ಇಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ